ನಡುಗುತ್ತುಂ ನೆನೆದಂತೆ ವಲ್ಲಭೆಯುರಂ ತಬ್ಬಿಕ್ಕೈಸುವರ್ ತಾಮೆ ತ ।
ವ್ಮೊಡಲಂ ಮೆಯ್ಮುವಿರುರ್ಚೆ ತಮ್ಮಧರಮಂ ತಾವಿಱಿದ್ದು ದಂತಾಗ್ರದಿಂ ॥
ಪಿಡಿವರ್ ಪಾಂಥರೆಸಲ್ಕೆ ತಬ್ಬಿ ತರುಣೀ ಸೋಷ್ಣಸ್ತನದ್ವಂದ್ವಮಂ ।
ಬಿಡಲೇನಾರ್ಪರೆ ಪುಣ್ಯವಂತರಱಿಪರ್ ತಾಮಂತೆ ಹೇಮಂತದೊಳ್ ॥೧೮॥

ನಂದುವ ಪುಲ್ಲ ಕಿಚ್ಚಿನೊಳೆ ಕಪ್ಪಡಮಂ ಪರಿದಿಕ್ಕಿ ಪಾಂಥನುಃ ।
ಪೆಂದಿರದೂದೆ ಪೂಣ್ಮೆ ಪೊಗೆ ಕಣ್ಣೊಳಗಂ ಪುಗೆ ಬಾಷ್ಪಬಿಂದು ಬೀ ॥
ಱ್ತಂದು ತಡಗ್ನಿಯುಂ ನದಿಪಿದತ್ತಕಟಾತನ ಬೆನ್ನ ಕಪ್ಪಡಂ ।
ಬೆಂದುದು ಬಂದುದಾಗಳೆ ಹಿಮಾನಿಳನಿಂತುಟು ಪಾಂಥರುಬ್ಬಸಂ ॥೧೯॥

ಪೊಸಪುಲ್ಲೊಳ್ ಕಿಚ್ಚನಿಟ್ಟೂದಿಮೊಡುರಿದುರಿ ಕೂರ್ಚಾಗ್ರಮಂ
ಪತ್ತೆ ಕೆಯ್ಯುಂ ।
ಪೊಸೆದುಂ ವಸ್ತ್ರಾಗ್ರದಿಂ ಮೋದಿಯುಮುಂಗುಳ್ವಱಿಯುಂ ನಾಂದಿಯುಂ
ಮೊಕ್ಕಳಂ ನಂ ॥
ದಿಸಲೆಂತುಂ ಪಾಂಥಸಂದಾಱಿದೆ ನಡುಮಡುವಂ ಪೋಗಿ ಬಿರ್ದ್ದೈಕಿಲಿಂ ಕ೧।
ಪಿಸುತಿರ್ದಂ ಪುಲ್ಲ ಕಿಚ್ಚುಂ ಪೊಲೆಯನ ಕೆಳೆಯುಂ ಮಾಡದಾವಂಗೆ
ಕೇಡಂ ॥೨೦॥

ತಳಿರೊಳ್ ಮುಚ್ಚಿಟ್ಟು ಕೂಸಂ ಶಬರಿ ತೆಗೆದು ನಿಶ್ಚೇಷ್ಟಮಾಗಿರ್ದೊಡಂ ಕ ।
ಣ್ಗಳ ನೀರಂ ತೀವಿ ಬೇಗಂ ತೊಡೆದು ಹಿಮಕಣಾನೀಕಮಂ ತೇಂಕುದಾಣಂ।
ಗಳಸಂಟಂಟೆಲ್ಲಿಯುಂ ಕಾಣದೆ ಹರಣಮನತ್ಯುಷ್ಣದಿಂ ಸುಯ್ಯೆ ಸುಯ್ಯುಂ ।
ದೆಳಗೂಸೆಚ್ಚಿತ್ತು ಕಾವ್ಕಾಮೆನೆ ತೊಱೆದ ಕುಚಾಗ್ರಂಗಳಂ–
ನೀಡುತಿರ್ದಳ್ ॥೨೧॥

ಜಡನೆಂದಜನಂ ನುಡಿವರ ।
ನುಡಿಗಕ್ಕೆ ಶುಭೋದಯಂ ಸ್ವಜನಕಾಂಬುಜಮಂ ॥
ಕಿಡಿಸುವ ಶಿಶಿರಾಗಮಮಂ ।
ಪಡೆದಪನಿನ್ನವು ವಿವೇಕವಿಕಳತೆಯೊಳವೆ ॥೨೨॥

ಅರವೆ ಮುಗಿದಿರ್ದು ಮೋರೊ ।
ಮರ ನೆರ್ದೆಯೊಳೆಪುಗಿಸಿ ಮುಚ್ಚಿದಂತಲರ್ಗಣ್ಗಳ್ ॥
ಕರಮೆ ಬೆಮರ್ತುವು ಬೆರಸಲ್ ।
ಕರಗುವವೊಲ್ ಕೋಮಲಾಂಗ ಲತಿಕೆಗಳವರಾ ॥೫೮॥

ತೞ್ತೇನೆಸೆದರೊ ನುಣ್ದೊಡೆ ।
ಯೊಳ್ತೊಡೆ ಮೆಲ್ಲೆರ್ದೆಯೊಳೆರ್ದೆ ತೊಡಂಕಿರೆ ಸಳಿತೋ ॥
ಳ್ತೋಳೋಳ್ ಸಗೆಮೊಗದೊಳ್ ಮೊಗ ।
ಮೇೞ್ತಿಂದಿರೆ ಮೋಹದಿಂದಮಾಸ್ತ್ರೀಪುರುಷರ್ ॥೫೯॥

ಕುರುಳಿಂ ಕೋದವರೆರ್ದೆಗಳ ।
ನರಿವಂತಿರೆ ನಿಟ್ಟನಿಡಿಯ ನನೆವಿಲ್ಪಿಡಿದಿ ॥
ಮರುಮನಿರದೊಂದೆ ಸರಲಿಂ ।
ದುರುಳೆಚ್ಚನೊ ಮದನನಿನಿಸು ಮೋಹದಿನಾಗಳ್ ॥೬೦॥

ಮಱಿದೊಱಗಿದ ನಲ್ಲರಬಾ ।
ಯ್ದೆಱೆಯಿಂ ಪೊಱಮಡುವ ಪುಗುವ ನಱುಸುಯ್ಯೊಂದಂ ॥
ಕಱೆಯುತ್ತೊರ್ಬರ ಮೆಯ್ವೆ ।
ಯ್ಯೊಱೆಯಿಂ ಪೊಱಮಡುವ ಪುಗುವಹರಣಮನಿೞಿಕಂ ॥೬೧॥

ಕಾಮಿನಿಯ ಶಿಥಿಲಕಚಕಬ ।
ರೀಮೇಘದಿನುದಿರ್ದ ತೋರಮಲ್ಲಿಗೆ ಮುಗುಳ್ಗಳ್ ॥
ಕಾಮಪ್ರಳಯಂ ಕವಿತರೆ ।
ಪೂಮೞೆಸುರಿವಂತೆ ಸುರಿದುವಂಗದೊಳವರಾ ॥೬೨॥

ಆರಸಸ ಕೊರಲೊಳ್ ತೊಡರ್ದಂ ।
ಬುರುಹಾಕ್ಷಿಯ ಕೇಶಪಾಶಮೇಂ ಪೋಲ್ತುದೊಱೆ ॥
ಚ್ಚರಮಂತು ಮುಚ್ಚೆವೋಪಂ ।
ತಿರೆಕಡುಪಿಂ ಕೊಂಡಕಾಮಕಾಳೋರಗಸಂ ॥೬೩॥

ಕೊರಗಿದಪುದೆಂದು ತಳಿವಂ ।
ತಿರೆ ನೆಯ್ದಿಲಿನಮೃತ ರಸಮನಾಸಕಳ ಸುಧಾ ॥
ಕರಮುಖಿ ಪೂಸಿನ ಸರದೊಳ್ ।
ಸುರಿದಳ್ ಬಾಷ್ಪಾಂಬುವಂ ವಿಲೋಲಾಕ್ಷಿಗಳಿಂ ।೮೧॥

ಏವಣ್ಣಿಪೆನಾ ಸಂಪಗೆ ।
ಪೂವಿನಮಾಲೆಯೊಳೆ ಪಾಯ್ದು ಬಿರ್ದಿರ್ದುವು ಮಿಾ ॥
ಚಾರ್ಭವೇಗಮನಾಳ್ದಂತೆವೊ ।
ಲಾವನಿತೆಯ ಮುಗ್ಧನಯನ ಭೃಂಗಯುಗಂಗಳ್ ॥೮೨।

ಅಂತು ನೋಡುವಳಂ ಕಂಡು ಮನಂಗೊಂಡು ಕಳಾವತಿ ಮತ್ತಂ ಇಂತೆಂದಳ್:—ಇದು ಪದ್ಮಾವತಿಯ ವರಮುಂ ನಿಜಪತಿಯ ಬರವುಂ ಬಲ್ಲವರ್ ಬರೆದಂತೆ ತಪ್ಪಿದುದಿಲ್ಲೆಂತಪ್ಪೊಡವಾದುದುಮಲ್ಲದಲ್ಲಿ ಮನಂ ಪಸಲ್ವೇಡ. ನೀನತಿಸ್ನಿಗ್ಧೆಯುಂ ಮುಗ್ಧೆಯುಮಪ್ಪುದರಿಂ ನಿಜಪತಿಸ್ಪರ್ಶದತ್ತ ಮೂರ್ಛೆಯಿಂ ಮೆಯ್ಮರೆದು ಕನಸೆಂದೇ ಬಗೆದೆಯಾನಿನ್ನುಮೊಂದು ತೆರದಿಂ ತೋರಿದಪ್ಪೆನೆಂದಾಕೆಯನೆತ್ತಿ ಪಾಸಿನಪಚ್ಚವಡಿಕೆಯಂ ನೋಡಿದಾಗಳ್—

ಕುದಿಯೆ ಬೆಮರ್ತು ಪಚ್ಚಡದೊಳಚ್ಚೞಿದಂತಿರೆ ಪತ್ತಿತೋರ್ಪುವೊ।
ಳ್ಗದಪಿನ ನೀಳ್ದತೋಳೆ ನತಪಾರ್ಶ್ವದ ಪರ್ಬುಗೆವೆತ್ತ ಬೆನ್ನ ಕೊ ॥
ರ್ಬಿದ ಪೊಱವಾಱ ಪೆರ್ದೊಡೆಯ ಜಂಘೆಯ ಪಾದದ ಪಜ್ಜೆಯೆಯ್ದೆ ಮು
ಟ್ಟಿದ ಕೃಶಮಧ್ಯದೊಂದೆಡೆಯೊಳೇನೆಸೆದಿರ್ದುದೊ ರಾಜಪುತ್ರನಾ ॥೮೩॥

ಅದಂ ಕಂಡಾಕೆ ಪರಮಪಂಡಿತೆಯಪ್ಪುದಱಿಂದಾತನುಮತನುತಾಪತಪ್ತನಪ್ಪುದನನುಮಾನದಿಂದಱಿದುಮೆಯ್ವೆಂಕೆಯಿಂದೊಳಗು ಕಂದೆ ಕತ್ತುರಿಯ ಪಳಕಿನಂತೆ ಪುಳಿಚೆರ್ದ ಚಂದನದಣ್ಪುವೆರಸು ಪತ್ತಿದ ಪರಿಮಳಮುಮಂ ಪರಪುವೀ ಬೆಮರ ಪಜ್ಜಳಿಸುವ ಪಜ್ಜೆ ನಿಜಮನಃಪ್ರಿಯನ ಪಜ್ಜೆಯಿದು ನಿನ್ನ ಮೆಯ್ವಜ್ಜೆಯೆ ಮಲ್ಲಿಗೆಯ ಮರುಗದ ಬೆರಕೆವಾಸಿಗಂ

